ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 5, Mar-Apr 2020, 23-30
©IIMRD, Mysuru
IIMRD JOURNALS
www.iimrd.com

# ಬೇಂದ್ರೆಯವರ ಕವಿತೆಗಳಲ್ಲಿ ಜೀವನ, ಹೆಣ್ಣು ಮತ್ತು ಮಣ್ಣಿನ ಅನಾವರಣ

ಡಾ.ಎಸ್. ಬಿ. ರಾಠೋಡ[1]

## ಪೀಠಿಕೆ

ಹತ್ತನೆಯ ಶತಮಾನದಲ್ಲಿ ಪಂಪ, ರನ್ನ, ಜನ್ನ, ಪೊನ್ನರಂತೆ ಇಪ್ಪೊಂತ್ತಂದನೆಯ ಶತಮಾನದಲ್ಲಿ ಕಾವ್ಯದ ಕೀರ್ತಿ ಉತ್ತುಂಗಕ್ಕೇರಿಸಿದ ಮಹಾನ್ ಚೇತನರಲ್ಲಿ ಕುವೆಂಪು, ಬಿಎಂಶ್ರೀ, ತೀನಂಶ್ರೀ, ಆನಂದಕಂದ, ಗೋಕಾಕ, ಕೆ.ಎಸ್.ನರಸಿಂಹಸ್ವಾಮಿ, ಬೇಂದ್ರೆ ಮುಂತಾದವರು. ಹತ್ತನೆಯ ಶತಮಾನ ಹಳ್ಗನ್ನಡ ಶೈಲಿಯಾದರೆ, ಇವರ ಕಾಲಕ್ಕೆ ಹೊಸಗನ್ನಡ ಆವರಿಸಿಕೊಂಡಿತು. ಈ ಶತಮಾನದಲ್ಲಿ ಬಹಳ ಎತ್ತರಕ್ಕೆ ಬೆಳೆದಂತಹ ಕವಿಗಳೆಂದರೆ ಬೇಂದ್ರೆ ಮತ್ತು ಕುವೆಂಪು. ಕುವೆಂಪು ಅವರ ಸಾಹಿತ್ಯ ಬಹುಮಟ್ಟಿಗೆ ಪಂಡಿತ ವರ್ಗಕ್ಕೆ ಮೀಸಲಾದರೆ, ಬೇಂದ್ರೆಯವರ ಸಾಹಿತ್ಯ ಜನಸಾಮಾನ್ಯರಿಗೆ ಹತ್ತಿರವಾದದ್ದು. ಕವಿ ಬೇಂದ್ರೆ ಅವರ ಸಾಹಿತ್ಯ ರಚನ ಕಲೆ ಪೂರ್ಣ ಶಿಷ್ಟವೂ ಅಲ್ಲ ಅಥವ ಜನಪದವೂ ಅಲ್ಲ. ಒಂದು ರೀತಿಯ ವಿಶಿಷ್ಠ ಶೈಲಿ ಎಂದು ಹೇಳಬಹುದು. ಆ ವಿಶಿಷ್ಠ ಶೈಲಿಯಲ್ಲಿ ರಚಿತವಾದ ಸಾಹಿತ್ಯವೇ ಎಲ್ಲ ವರ್ಗಗಳ ಮನಸ್ಸು ಗೆದ್ದಿತು. ಈ ಕಾರಣಕ್ಕಾಗಿಯೇ ಜನಸಾಮಾನ್ಯರು ಹಲವಾರು ಬಿರುದು ಬಾವಲಿಗಳನ್ನು ಕೊಟ್ಟರು. ವರಕವಿ, ಶಬ್ದಗಾರುಡಿಗ ಕವಿ, ವಿಶಿಷ್ಠ ಶಬ್ದಕೋಶ ಕವಿ ಹೀಗೆ ಹಲವಾರು ರೀತಿಯಿಂದ ಕರೆಯಿಸಿಕೊಂಡವರು ಕವಿ ಬೇಂದ್ರೆ.

ಬೇಂದ್ರೆಯವರ ಕವಿತೆಗಳಲ್ಲಿ ನೋವು, ನಲಿವು, ಬಡತನ, ದುಃಖಗಳ ಸಂಕೇತದ ಧ್ವನಿ ಇದೆ. ಹೃದಯ ಮಿಡಿತದ ಭಾಷೆಯಿದೆ, ತಾವು ಪಟ್ಟ ಪಾಡುಗಳೇ ಕವಿತೆಯ ಸಾಲುಗಳೆಂದು ಸಾರಿ ಸಾರಿ ಹೇಳುತ್ತಿವೆ. ಈ ಸನ್ನಿವೇಶಗಳು ಓದುಗರ ಮುಂದೆ ಭಾವನ್ಮಾಕವಾಗಿ ನಿಲ್ಲುತ್ತವೆ.

## ಬೇಂದ್ರೆಯವರ ಕವಿತೆಗಳಲ್ಲಿ ಜೀವನದ ವ್ಯಾಖ್ಯಾನ

ವರಕವಿ ಬೇಂದ್ರೆಯವರು ಅವರ ಕವಿತೆಗಳಲ್ಲಿ ಜೀವನದ ಬಗ್ಗೆ ಹೇಳುವ ಮಾತುಗಳು ಸ್ವಾರಸ್ಯಕರವಾಗಿವೆ. 'ಜೀವನ ಎಂಬುವುದು ಅಖಂಡವಾಗಿ ಅರಳುವ ಹೂವಿನ ಬಳ್ಳಿ, ಬಳ್ಳಿಯಲ್ಲಿ ಕೆಲವು ಹೂವುಗಳು ಮೊಗ್ಗಾಗಿ, ಅರೆ ಮೊಗ್ಗಾಗಿ, ಬರಿದ ಮೊಗ್ಗಾಗಿ, ಬಾಡಿದ ಹೂವಾಗಿ, ಅರಳಿದ ಹೂವಾಗಿ, ಅವಸ್ಥೆಗಳು ಪಡೆದುಕೊಳ್ಳುತ್ತವೆ. ಹಾಗೆಯೇ ಜೀವನವೂ ಕೂಡ. ದಂಪತಿಗಳಿಗೆ ಹುಟ್ಟುವ ಮಕ್ಕಳು ಕೂಡ ಹೂವಿನಂತೆ . ಇದು ಸ್ವತಃ ಬೇಂದ್ರೆಯವರು ಅನುಭವಿಸಿದ ಜೀವನ. ಒಂಭತ್ತು ಜನ ಮಕ್ಕಳಲ್ಲಿ ಮೂರು ಜನ ಮಕ್ಕಳು ಬದುಕಿಕೊಳ್ಳುವರು. ಆದರೂ ಬಳ್ಳಿ ಮಾತ್ರ ತನ್ನ ದುಃಖನ್ನು ಒಳಗಡಗಿಸಿ ಹಚ್ಚಹಸುರಾಗಿ

[1] ಸಹಾಯಕ ಪ್ರಾಧ್ಯಾಪಕರು ಮತ್ತು ಸಂಶೋಧನಾ ಮಾರ್ಗದರ್ಶಕರು, ಎಸ್. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ–586205

ಕಾಣುತ್ತಿತ್ತು. ಹಾಗೆಯೇ ನಾವುಗಳು ನಮ್ಮ ನಮ್ಮ ಕಾರ್ಯದಲ್ಲಿ ತೊಡಗಬೇಕು. ಫಲಾ ಫಲ ದೇವರಿಗೆ ಬಿಟ್ಟುಕೊಟ್ಟ ವಿಷಯವೆಂಬುವುದು ಬೇಂದ್ರೆಯವರ ಅಭಿಮತ.

ಜೀವನ ಕುರಿತು ಮುಂದುವರೆದು ಹೇಳುವ ರೀತಿ ಅದ್ಭುತವಾದುದು. ಜೀವನವೆಂದರೆ ಅಧ್ಯಯನ, ಅಧ್ಯಾಪನ, ಕೃತಿ ರಚನೆಗಳ ಶಾಂತ ಗಂಭೀರ ಜೀವನವಲ್ಲ. ಅದು ನೂರಕ್ಕೆ ನೂರರಷ್ಟು ರಕ್ತ ಮಾಂಸಗಳ, ಪ್ರೇಮಕಾಮಗಳ, ತಿವ್ರ ಹಂಬಲ, ವಿಷಾದಗಳ ದೇಹಬದ್ಧ ಜೀವನ. ಅವರ ಪರಮಪ್ರಿಯ ಮಾಧ್ಯಮವಾದ ಭಾವಗೀತೆಗೆ ಹೊಂದಿಕೊಳ್ಳವಂತೆ, ತಿವ್ರವಾದ ಭಾವಾವೇಗಗಳ, ದ್ವೇಷಾಸೂಯೆಗಳ, ಪ್ರೀತಿ ಮೋಹಗಳ ಬದುಕನ್ನು ಬದುಕಿದವರು ಬೇಂದ್ರೆ. ಅವರ ಜೀವನ, ಸಾಗರದ ದಂಡೆಯಲ್ಲಿ ನಿಂತ ನಿರ್ಲಿಪ್ತ ವೀಕ್ಷಕರಲ್ಲ, ಅದರಲ್ಲೇ ಮುಳುಗಿ ತೇಲಿದವರು 'ಸಪ್ಪೆ ಬಾಳುವೆಗಿಂತ ಉಪ್ಪು ನೀರೇ ಲೇಸು' ಎಂಬುವುದು ಬೇಂದ್ರೆಯವರ ಜೀವನದ ಘೋಷ ವಾಕ್ಯ.[2]

**ಪಟ್ಟ ಪಾಡುಗಳು ಹಾಡುಗಳಾದದ್ದು**

ಬೇಂದ್ರೆ ಮತ್ತು ಕುವೆಂಪುರವರ ಕವಿತೆಗಳನ್ನು ಅವಲೋಕಿಸಿದಾಗ ಇವರಿಬ್ಬರ ಕವಿತೆಗಳಲ್ಲಿ ಭಿನ್ನತೆಗಳನ್ನು ಕಾಣುತ್ತೇವೆ. ಬೇಂದ್ರೆಯವರ ಕವಿತೆಗಳಲ್ಲಿ ಸರಳವಾದ ಭಾಷೆ ಬಳಕೆಗೊಂಡಿರುವುದು ಮತ್ತು ಕೊನೆಯಲ್ಲಿ ಸ್ವಲ್ಪಮಟ್ಟಿಗೆ ಪ್ರಾಸ ಹೊಂದಿಕೊಂಡಿರುವಂತೆ ತೋರುತ್ತವೆ. ಅದೇ ಕುವೆಂಪುರವರ ಕವಿತೆಗಳಲ್ಲಿ ವಿರಳ. ಕವಿತೆಗಳನ್ನು ಓದುಗರಿಗೆ ಸ್ವಲ್ಪ ಬಿಗಿಬಂಧದಂತೆಯಾಗಿ ತೋರುತ್ತದೆ. ಬೇಂದ್ರೆಯವರು ತಾವು ಕಂಡುಕೊಂಡ ಪ್ರತಿಯೊಂದು ಲೋಕಾನುಭವವನ್ನು ಕವಿತೆಗೆ ವಸ್ತುವಾಗಿಸಿ, ಅದಕ್ಕೊಂದು ಅರ್ಥ ಬರುವಂತೆ ವ್ಯಾಖ್ಯಾನಿಸಿರುವುದನ್ನು ಕಾಣುತ್ತೇವೆ. ಇದರಿಂದಾಗಿ ಕವಿತೆಗಳಲ್ಲಿ ನಿರ್ದಿಷ್ಟವಾಗಿ ಪ್ರಕೃತಿ ಕವಿತೆ, ಸಾಮಾಜಿಕ ಕವಿತೆ, ಪ್ರೇಮ ಕವಿತೆ, ದಾಂಪತ್ಯ ಕವಿತೆ, ಆಧ್ಯಾತ್ಮಿಕ ಕವಿತೆ, ಅಷ್ಟೇ ಅಲ್ಲದೆ ಕಣ್ಣಿಗೆ ಕಾಣುವ ವಸ್ತುಗಳನ್ನು ಕಾವ್ಯರೂಪ ಕೊಟ್ಟವರು ಬೇಂದ್ರೆ.

ಕವಿ ತಮ್ಮ ಜೀವನದಲ್ಲಿ ಕಹಿಯನ್ನುಂಡು ಜೀರ್ಣಿಸಿಕೊಂಡಿದ್ದಾರೆ. 'ನಂಜುಂಡ ಶಿವನಂತೆ' ತಾವು ನೋವುಂಡರೂ ಲೋಕಕ್ಕೆ ಶಿವರೂಪವೆನಿಸಿ ಸಿಹಿಯನ್ನು ನೀಡಿದ್ದಾರೆ. 'ಎನ್ನ ಪಾಡು ಎನಗಿರಲಿ ನಿಮಗೆ ಹಾಡನಷ್ಟೇ ನೀಡುವೆನು ರಸಿಕ' ಎಂದು ಸಹೃದಯಿ ಓದುಗರನ್ನು ಕೇಳಿಕೊಂಡಿದ್ದಾರೆ. "ಬೇಡನಿಂದ ವಧಿಸಲ್ಪಟ್ಟ ಗಂಡು ಕ್ರೌಂಚ ಪಕ್ಷಿಯ ಸಾವಿಗೆ ಕಂಬನಿಯನಿಟ್ಟು ಗೋಳಾಡುವ ಹೆಣ್ಣು; ಕ್ರೌಂಚ ಪಕ್ಷಿಯ ದುಃಖಕ್ಕೆ ಮರುಗಿ ರಸ ಋಷಿ ವಾಲ್ಮೀಕಿ ಬೇಡನನ್ನು ಶಪಿಸಿ ಉದ್ಗರಿಸಿದ ಶೋಕವು ಶ್ಲೋಕವಾಯಿತಂತೆ" ಹಾಗೆಯೇ ಬೇಂದ್ರೆಯವರು ತಮ್ಮ ಬಾಳಿನಲ್ಲಿ ಪಟ್ಟ ಕಷ್ಟಗಳನ್ನೆಲ್ಲ ಸುಂದರ ಭಾವಗೀತೆಗಳಾಗಿಸಿ ಓದುಗರನ್ನು ರಂಜಿಸಿದ್ದಾರೆ.

ಇಷ್ಟಲ್ಲದೇ 'ನರಬಲಿ' ಎಂಬ ಕವಿತೆಯನ್ನು ಬರೆದಾಗ ರಾಜದ್ರೋಹ ಎಂದು ಬಗೆದ ಬ್ರಿಟೀಷ ಸರಕಾರವು ಅವರನ್ನು ಸೆರೆಮನೆಗೆ ಹಾಕಿತು. ಮುಂದೆ ಹಲವಾರು ವರ್ಷ ಸರಕಾರಿ ಸೇವೆಯಿಂದ

---

[2] ಜಗದೀಶ ಕೊಪ್ಪ. ಎನ್.(2009). ಉತ್ತರ ದಕ್ಷಿಣ ಬೇಂದ್ರೆ ಕುವೆಂಪು ಕವಿತೆಗಳ ಕುರಿತು'. ಪಲ್ಲವ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ. ಪು.ಸಂ 123

ವಂಚಿತರಾದರು. ಈ ತರಹದ ಕವಿತೆಗಳು ಬೇಂದ್ರೆಯವರ ಜೀವಿತಾವಧಿಯಲ್ಲಿ ಬಹಳಷ್ಟು ಬರೆದಿರುವರು ಆದರೂ ಇಂತಹ ಅಪಾಯದಿಂದ ಪಾರಾದ ಸಂಗತಿಯೆ ಜಾಸ್ತಿ. ಆದ್ದರಿಂದ ಅವರು ಜೀವನದಲ್ಲಿ 'ಅರ್ಥವಿಲ್ಲ ಸ್ವಾರ್ಥವಿಲ್ಲದ ಬರಿ ಭಾವಗೀತೆ' ಎಂದು ಹೇಳುವರು.

ಸ್ವ ಅನುಭವವೇ ಆಗಲಿ, ಲೋಕಾನುಭವವೇ ಆಗಲಿ, ಬೇಂದ್ರೆಯವರ ಕಾವ್ಯದ ಉದ್ದೇಶ ಆ ಅನುಭವವನ್ನು ಸಂಕೇತವಾಗಿಸಿ ಅದರ ಮೂಲಕ ಜೀವನದ ಆಳವಾದ ತಿಳುವಳಿಕೆಯನ್ನು ಪಡೆಯುವುದೇ ಆಗಿದೆ. ಬೇಂದ್ರೆಯವರ ಸ್ವ- ಅನುಭವದ ಕವನವನ್ನು ಉದಾರಿಸಬಹುದು.

**ಬಾರೋ ಸಾಧನ ಕೇರಿಗೆ**

**ಮರಳಿ ನಿನ್ನೀ ಊರಿಗೆ॥**

**ಮಳೆಯು ಎಳೆಯುವ ತೇರಿಗೆ**

**ಹಸಿರು ಏರಿದೆ ಏರಿಗೆ**

**ಹಸಿರು ಸೇರಿದೆ ಊರಿಗೆ**

**ಹಸಿರು ಬಾಚಿದೆ ದಾರಿಗೆ**

**ನಂದನದ ತುಣುಕೊಂದು ಬಿದ್ದಿದೆ**

**ನೋಟ ಸೇರದು ಯಾರಿಗೆ ? ॥ ಬಾರೋ॥**

ಈ ಮೇಲಿನ ಕವಿತಯನ್ನು ಹಲವಾರು ವಿಮರ್ಶಕರು, ಸಂಶೋಧಕರು, ಹಲವಾರು ರೀತಿಯಿಂದ ವಿಮರ್ಶಿಸಿದ್ದಾರೆ. ಆದರೆ ಕವಿತೆ ರಚಿತ ಸಮಯವೇ ಅವರು ನೌಕರಿ ಕಳೆದುಕೊಂಡ ಸಂದರ್ಭ. 'ನರಬಲಿ' ಕವಿತೆಯಿಂದ ರಾಜ ದ್ರೋಹದ ಪಟ್ಟಕಟ್ಟಿ ಹತ್ತು ವರುಷಗಳ ಕಾಲ ಸರಕಾರಿ ಹುದ್ದೆಯಿಂದ ವಂಚಿತರಾಗಬೇಕಾದ ಪ್ರಸಂಗ ಒದಗಿ ಬಂತು. ಮುಂದೆ 1947 ರಲ್ಲಿ ಕಾಯ್ದೆ ಸಡಿಲಿಕೆ ಆದ ಕೂಡಲೇ ಗದುಗಿನ ಸಮಿತಿ ಹೈಸ್ಕೂಲಿನಲ್ಲಿ "ಹೆಡ್ ಮಾಸ್ತರ" ಹುದ್ದೆ ಲಭಿಸುತ್ತದೆ. ಸಂಸಾರದ ಸರಂಜಾಮಿನೊಂದಿಗೆ ಗದುಗಿಗೆ ಹೋದರು. ಮುಂದೆ ವರ್ಷ ತುಂಬುವುದರಲ್ಲಿ ತಮ್ಮ ನೌಕರಿ ಕಳೆದುಕೋಳ್ಳುತ್ತಾರೆ. ಏಕೆಂದರೆ ಬೆಳವಾಡಿ ಸಾಹಿತ್ಯ ಪ್ರಿಯ ಊರು ಅಲ್ಲಿ ಬಿಎಂಶ್ರೀ ಅವರು ಬರುವುದು ಗೊತ್ತಾಯಿತು ಹಾಗೆಯೇ ಇವರಿಗೂ ಕೂಡ ಅಹ್ವಾನ ಇತ್ತಿದ್ದರು. ಆ ಕಾರ್ಯಕ್ರಮ ವೈಭವಪೂರ್ಣವಾಗಿ ನಡೆಯುತ್ತದೆ. ಹಾಗೆ ಬಿಎಂಶ್ರೀ ಅವರ ಭೇಟಿಯಿಂದ ಇವರಿಗೆ ಸಂತೋಷಕ್ಕೆ ಪಾರವೇ ಇರಲಿಲ್ಲ. ಎರಡನೆ ದಿನ ಕಾರಹುಣ್ಣಿಮೆ ಇರುವುದರಿಂದ, ಜನರ ಒತ್ತಾಯದ ಮೇರೆಗೆ ಮತ್ತೊಂದು ದಿನ ಉಳಿದುಕೊಂಡು ಮಾರನೆ ದಿನ ಬರುತ್ತಾರೆ. ಇವರ ಕಾರ್ಯಕ್ರದ ವೈಭವತೆ ಪತ್ರಿಕೆಯಿಂದ ತಿಳಿದುಕೊಂಡ ಸಮಿತಿಯವರು, ಇವರ ಕೈಗೊಂದು ಪತ್ರ ಕೊಡುತ್ತಾರೆ. ಖುಷಿಯಿಂದ ಪತ್ರವನ್ನು ತಗೆದು ನೋಡಿದರೆ ಕಾರಣವಿಲ್ಲದೆ ನೌಕರಿಯಿಂದ ವಜಾ ಮಾಡಿರುವುದನ್ನು ನೋಡಿ ಸಿಡಿಲು ಬಡಿದಂತಾಗುತ್ತದೆ. ಬೇಂದ್ರೆಯವರು ಕೂಡ ಕಾರಣ ಕೇಳದೆ ಮತ್ತೆ ತನ್ನ ಊರಿಗೆ ಮರಳಿ ಬರುವರು. ಈ ಸಂದರ್ಭದಲ್ಲಿಯೇ ಅದ್ಭುತ ಕವನ ರಚಿತವಾದದ್ದು ಬಾರೋ ಸಾಧನ ಕೇರಿಗೆ ಮರಳಿ ನಿನ್ನೀ ಊರಿಗೆ.

ಈ ಕವನವು ಸರಳವಾದ ಸಹಜ ಸುಂದರವಾದ ಭಾವಗೀತೆ. ತಮ್ಮ ಮನೆಯ ಸುತ್ತಲಿನ ನಿಸರ್ಗದ ಚಿತ್ರಣವಾಗಿದೆ. ಮಳೆಗಾಲದಲ್ಲಿ ಧಾರವಾಡ ನೋಡುವುದೇ ಒಂದು ವೈಭವಪೂರಿತ. ಅರೆ ಮಲೆನಾಡು ಎಂದೇ ಪ್ರಸಿದ್ಧಿ ಹೊಂದಿರುವ ಧಾರವಾಡ ಬೇಂದ್ರೆಯಂತಹ ಸೃಜನಶೀಲ ಕವಿಗೆ ಜನ್ಮ ಕೊಟ್ಟು ಪಾವನವಾಗಿದೆ. ಇಡಿ ನಿಸರ್ಗವೇ ಬೇಂದ್ರೆಯವರ ಕೈಗೊಂಬೆಯಂತೆ ಕುಣಿದಿದೆ. ಇಂದು ಅದೇ ವಾತವರಣ ಧಾರವಾಡದಲ್ಲಿ ಕಾಣಲು ಸಾಧ್ಯವಿಲ್ಲ ಬೇಂದ್ರೆಯವರ ಸಾಧನಕೇರಿ ಉಳಿದು ಕೊಂಡಿಲ್ಲ. ಆ ನಂದನದ ತುಣುಕು ತಮ್ಮೊಂದಿಗೆ ಕರೆದುಕೊಂಡು ಹೋಗಿದ್ದಾರೆ ಎಂಬ ಭ್ರಮೆ ನಮ್ಮಲ್ಲಿ ತಾಳುತ್ತದೆ.

ಅಂಬಿಕಾತನಯದತ್ತರ ಮನೆ ಧಾರವಾಡದ ಗೋವಾ ಮಾರ್ಗಕ್ಕೆ ಹೋಗುವ ಹರದಾರಿಯಲ್ಲಿದೆ. ಸಾಧನಕೇರಿಯ ಸ್ವಂತ ಮನೆಯಲ್ಲಿ ಅನೇಕ ವರುಷಗಳಿಂದ ವಾಸವಾಗಿರುವುದು, ಇಂದು ಅವರ ಹೆಸರಿನ ಟ್ರಸ್ಟ್ ಕೂಡ ಅಲ್ಲೆ ಇದೆ. ಪಕ್ಕದಲ್ಲಿ ಅವರು ವಾಸವಾಗಿದ್ದ ಮನೆಯೂ ಇದೆ. ಇಂತಹ ಯಥೇಚ್ಚವಾಗಿರುವ ವಾತಾವರಣದಲ್ಲಿ ತಮ್ಮ ಭಾವನೆಗಳಿಗೆ ಹೃದಯಸ್ಪೂರ್ತಿಯ ಸೆಲೆಯಾಗಿ ನಿರೀಕ್ಷೆಗೆ ಮೀರಿದ ಕವನಗಳು ರಚಿತವಾಗಿವೆ. ಕವಿಯ ಜೀವ ಸಾಧನಕೇರಿಯಲ್ಲಿಯೇ ನಿಸರ್ಗದ ಚೆಲುವಿನಲ್ಲಿಯೇ ಸೀಮಾತೀತವಾದ ಅಮಿತಾನಂದವನ್ನು ಪಡೆದಿದೆ. ಕವಿ ಬೇಂದ್ರೆಯವರು ಜೀವನ ನಿರ್ವಹಣೆಗಾಗಿ ಗದಗ ಅಲ್ಲದೆ ಪುಣೆ, ಸೊಲ್ಲಾಪುರ ಮುಂತಾದ ಕಡೆ ನೌಕರಿಗಾಗಿ ಅಲೆದಾಡಿದ್ದಾರೆ. ಆದರೆ ಅವರು ಒಂದೆಡೆ ನೆಲೆನಿಲ್ಲದೆ. ಮರಳಿ ಸಾಧನ ಕೇರಿಯ ಕಡೆ ದಾಪುಗಾಲು ಇಟ್ಟಿದ್ದು ಕಾಣುತ್ತೇವೆ. ಸಾಧನ ಕೇರಿಗೆ ಮರಳಿದಂತೆ, ತನ್ನ ಮನೆಗೆ ಬಂದು ಆನಂದದ ತನ್ಮಯತೆಯನ್ನು ಹೊಂದಿದಂತೆ ಕವಿಗೆ ಅನುಭವವಾಗಿದೆ.

**ಬೇಂದ್ರೆಯವರ ಕವಿತೆಗಳಲ್ಲಿ ತಾಯಿ ಮತ್ತು ಭೂತಾಯಿ**

ಕವಿ ಹಾಗೂ ಕಾವ್ಯದ ವೈಶಿಷ್ಟ್ಯದ ಬಗ್ಗೆ ಅರಿಯಲು ಕವಿಯ ವೈಯಕ್ತಿಕ ಬದುಕು ಹಾಗೂ ಆತನ ಬದುಕಿನ ಹಿನ್ನಲೆ ಕಾವ್ಯ ಸೃಷ್ಠಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಹಾಗೆಯೇ ಕವಿ ಬೇಂದ್ರೆಯವರ ವ್ಯಕ್ತಿತ್ವ ರೂಪಗೊಳ್ಳವುದರಲ್ಲಿ ಅವರ ಮನೆತನದ ಹಿನ್ನಲೆ ಮುಖ್ಯವಾದ ಪಾತ್ರವಹಿಸುತ್ತದೆ. ಧಾರವಾಡದ ಪರಿಸರ ಹಾಗೂ ಗೆಳೆಯರ ಒಂದು ಪಾಲಾದರೆ ಮತ್ತೆ ತಾಯಿ ಮತ್ತು ಅಜ್ಜಿಯವರದ್ದು ಇನ್ನೊಂದು ಪಾಲು. ಎಲ್ಲವು ಇವರ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರಿದೆ. ಹೆಣ್ಣು ತಾಯಿಯಾಗಿ, ಅಜ್ಜಿಯಾಗಿ, ಸಂಗಾತಿಯಾಗಿ ಅಗಾಧವಾದ ಪರಿಣಾಮವನ್ನು ಬೀರಿದ್ದಾಳೆ. ಈ ಕಾರಣಕ್ಕಾಗಿಯೇ, ನಿನ್ನ 'ತನಯದತ್ತನು ನೀನು ಇತ್ತುದಿತ್ತನು' ಎಂದೆಲ್ಲಾ ಒಂದು ಕವಿತೆಯಲ್ಲಿ ಮನ ದುಂಬಿ ಹಾಡಿದ್ದು ಉತ್ಪ್ರೇಕ್ಷೆ ಅಲ್ಲ.

ಬೇಂದ್ರೆಯವರ ಜೀವನ ಸ್ತ್ರೀ ಪೋಷಿತವಾದ ಜೀವನ ಚಿಕ್ಕ ವಯಸ್ಸಿನಲ್ಲೇ ತಂದೆಯ ಸಾವು, ನಂತರ ಸಹಜವಾಗಿ ಅವರ ಅಜ್ಜಿ ಗೋದುಬಾಯಿ ಮತ್ತು ತಾಯಿ ಅಂಬವ್ವನವರ ರಕ್ಷಣೆಯಲ್ಲಿ ಅವರ ಜೀವನ ಕಳೆಯಿತು. ಇವರ ಕವಿತೆಯಲ್ಲಿ ತಾಯಿ ಪರಿಕಲ್ಪನೆಯ ಮೂಲನೆಲೆ ಅಡಗಿರುವುದನ್ನು ಕೀರ್ತನಾಥ ಕುರ್ತುಕೋಟಿಯವರು ಗುರುತಿಸಿದ್ದಾರೆ. ಬೇಂದ್ರೆಯವರ ವ್ಯಕ್ತಿತ್ವ ರೂಪಗೊಳ್ಳುವುದಕ್ಕೆ. ಅವರ ಮನೆತನ ಮತ್ತು ಸುತ್ತಮುತ್ತಲಿನ ಪರಿಸರ. ಇವುಗಳ ಜೊತೆಗೆ ಬೇಂದ್ರಯವರ ಕಾವ್ಯಪ್ರತಿಭೆಯ ಉಗಮ ಅವರ

ತಾಯಿಯ ಹೃದಯದಲ್ಲಿದೆ ಆದರೆ ಅದು ಧಾರವಾಡದ ನದಿ ಶಾಲ್ಮಲೆಯ ಉಗಮದಂತೆಯೇ ನಿಗೂಢವಾಗಿರುವುದು ಸತ್ಯ.

ಕವಿ ಬೇಂದ್ರೆಯವರು ಹೆಣ್ಣು-ಮಣ್ಣುಗಳ ಪರಿಕಲ್ಪನೆ ಕಾವ್ಯದಲ್ಲಿ ರಸವತ್ತಾಗಿ ಮೂಡಿ ಬಂದಿವೆ. ಹೆಣ್ಣು ಅಂದರೆ ಜನ್ಮ ನೀಡಿದ ತಾಯಿ, ಮಣ್ಣು ಅಂದರೆ ಭೂಮಿತಾಯಿ ಇವೆರಡೂ ಅನುಭವಕ್ಕೆ ತನ್ಮತೆಯಿಂದ ಪ್ರತಿಕ್ರಿಯಿಸುತ್ತಾರೆ. ಕವಿಯವರ ದೃಷ್ಠಿಯಲ್ಲಿ ಭೂಮಿಯೆಂದರೆ ಅದು ಬರೀ ಮಣ್ಣಲ್ಲ. ಮನುಷ್ಯನ ಎಲ್ಲಾ ಆಗು ಹೋಗುಗಳ ತೊಟ್ಟಿಲಾಗಿರುವ ಭೂಮಿತಾಯಿಯನ್ನು ತಮ್ಮ 'ಬಿಡಿ ಮುತ್ತು' ಕವಿತೆಯಲ್ಲಿ ವರ್ಣಿಸಿರುವುದು ಹೀಗೆ.

**ಮಣ್ಣೆಂದು ಜರೆಯುವರು?**

**ಏನು ಮಣ್ಣೋ ಕಾಣೆ**

**ಮಣ್ಣ ಬೆಳೆ, ಮಣ್ಣ ಕಳೆ, ಮಣ್ಣಗಂಪು**

**ಒಡೆಯ ಬಿಟ್ಟರು**

**ಒಡಲು ಬಿಡದು ಮಣ್ಣಿನ ನೆರೆಯ**

**ಬೂದಿಯಾದರು ಬದುಕು ಮಣ್ಣ ತಂಪು**

ಹೊತ್ತ ತಾಯಿ ಮಣ್ಣು ಎಂದು ಬೈಯ್ಯುವವರಿಗೆ ಮಣ್ಣಿನ ಬೆಲೆ ತೋರಿಸಿಕೊಟ್ಟ ಕವಿ ಬೇಂದ್ರೆ ಅಣು-ತೃಣುವಿನಲ್ಲಿ ಅಡಗಿಕೊಂಡಿರುವ ಸಣ್ಣ ಅತಿಸಣ್ಣ ಕ್ರಿಮಿಕೀಟಗಳಿಂದ ಹಿಡಿದು ಅತಿ ತಿಳುವಳಿಕೆಯುಳ್ಳ ಮನುಷ್ಯನವರೆಗೆ ರಕ್ಷಣೆ ಕೊಟ್ಟ ತಾಯಿ ಭೂಮಿ ತಾಯಿ. ಮಣ್ಣಿನಲ್ಲಿ ಬೆಳೆ, ಮಣ್ಣಿನಲ್ಲಿ ಕಳೆ, ಮಣ್ಣಿನಲ್ಲಿ ಮಣ್ಣಾಗಿ ಒಡಲು ತಂಪುಗೊಳಿಸುವ ನಾವುಗಳು ಮಣ್ಣನ್ನು ಜರೆಯುದೇಕೆ? ಹೆತ್ತ ತಾಯಿ ಸೇವೆ ಮಾಡಬೇಕಾಗಿದೆ. ಇದು ಮಣ್ಣಲ್ಲಿ ಈ ಭೂಮಿ ದೇವನೊಲುಮೆ ಎಂದು ಕವಿ ಅಭಿಪ್ರಾಯ ಪಡುವರು. ಅಷ್ಟೇ ಅಲ್ಲದೆ ಭೂಮಿಯನ್ನು ತಾಯಿಯೆಂದೇ ಪರಿಭಾವಿಸುವ ಬೇಂದ್ರೆಯವರು, ತಮ್ಮ 'ಭೂಮಿ ತಾಯಿ' ಕವಿತೆಯಲ್ಲಿ ಭೂಮಿಯನ್ನು ಹೆತ್ತ ತಾಯಿಯ ಸ್ಥಾನ ಕೊಟ್ಟಿರಿರುವುದು ಅದ್ಭುತವಾಗಿದೆ.

**ಕಂಡಲ್ಲಿ ನಿನ್ನ ಮುಖವು**

**ಕಣ್ತುಂಬ ನನಗೆ ಸುಖವು**

**ನೆಲದುದ್ದ ತೊಡೆಯು ನಿನಗೆ**

**ಮನವಾರೆ ನಿದ್ದೆ ನನಗೆ**

ಹೆತ್ತ ತಾಯಿ, ಹೊತ್ತ ತಾಯಿಯ ರೂಪದಲ್ಲಿ ಕಾಣುವುದು ನಿನ್ನ ಮುಖವು, ಎಲ್ಲಿ ಕಾಣುವುದೋ ಅಲ್ಲಿ ನನಗೆ ಕಣ್ತುಂಬ ಮನವಾರೆ ಮುದ ದೊರೆಯುತ್ತದೆ. ನಾನು ನೆಲದ ಮೇಲೆ ಮಲಗಿದರು ತಾಯಿ ನಿನ್ನ ತೊಡೆಯ ಮೇಲೆ ಮಲಗಿ, ಜೋಗಳದ ಸ್ವರ ಕೇಳಿ, ನಿನ್ನ ಲಾಲಿತ್ಯದ ಮಡಿಲಲ್ಲಿ ಮಲಗಿದಂತಾಗುತ್ತದೆ. ಎಂಬ ವೈಚಾರಿಕ ಸಂಬಂಧ ಈ ಮೇಲಿನ ಸಾಲುಗಳಲ್ಲಿ ವ್ಯಕ್ತವಾಗಿದೆ.

**‘ಯಾ ಬಣ್ಣ ಇದ್ದರೇನು**

**ಯಾಕಣ್ಣ ಅದರ ಮಾತು?**

**ಬೆಳಕಾಗಲೆಮ್ಮ ಬದುಕು**

**ಬಂದಿತು ಜೀವ ಹುತು.’**

ಹೀಗೆ ಭೂಮಿ ತಾಯಿಯ ಆಂತರ್ಯದಿಂದ ಹೊಮ್ಮುವ ಬೆಳಕಿನಿಂದಲೇ ನಮ್ಮ ಬದುಕು ಹಸನಾದೀತು ಎಂಬ ನಂಬಿಕೆ ಕವಿ ಕವನದಲ್ಲಿ ಮೂಡಿಸಿರುವರು. ಹೀಗೆ ಹಲವಾರು ಕವನಗಳು ಭೂಮಿತಾಯಿ ಕುರಿತು ರಚಿತಗೊಂಡಿವೆ. ‘ಚಿಗರಿಗಂಗಳ ಚೆಲುವೆ’ ಈ ಕವನದಲ್ಲಿ ಮನುಷ್ಯ ಭೂಮಿಯ ಮೇಲೆ ಮಾಡುತ್ತಿರುವ ಹಿಂಸೆ ಕೌರ್ಯದಿಂದ ಭೂಮಿ ತಾಯಿ ನಲುಗಿ ಹೋಗಿದ್ದಾಳೆ ಎಂಬ ವಿಷಯ ವ್ಯಕ್ತಪಡಿಸುತ್ತಾರೆ. ಮುಂದುವರೆದು ಭೂಮಿ ತಾಯಿಯನ್ನು ‘ಮೊದಲಗಿತ್ತಿ’ ಎಂದು ಕರೆದಿರುವುದನ್ನು ಕಾಣುತ್ತೇವೆ. ಹಿಂಸೆಗೆ ಕಾರಣವಾದವರನ್ನು ಅಡಗಿಸುವ ಶಕ್ತಿ ನಿನ್ನಲ್ಲಿದೆ ತಾಯಿ ಎಂಬುದು ಕವಿಯ ನಂಬಿಕೆ.

**‘ಹದಿನಾರು ರಾಜರು ತಲೆ ಕಳೆಗಾದರು**

**ಆದರೂ ತಲೆ ಎತ್ತಿ ನಿಂತಿರುವೆ**

**ನಿನ್ನ ತೇಜದ ಮುಂದೆ ರಾಜ ತೇಜವು ಕೂಸು**

**ಮೊದಲಗಿತ್ತಿಯು ನೀನು ಮೆರೆಯುತಿಹೆ’.**

ಎಂತಹ ಬಲಿಷ್ಠನಾಗಿ ಮೆರೆದು ವಿಶ್ವವೇ ಗೆದ್ದಿದ್ದೇನೆ ಎಂಬ ಅಹಂ ಭಾವವದಲ್ಲಿದ್ದರು ನಿನ್ನ ಮಡಿಲು ಸೇರಬೇಕು. ನಿನ್ನ ಮುಂದೆ ತಲೆ ಎತ್ತಿ ನಿಲ್ಲುವ ಹಾಗೆ ಇಲ್ಲ, ನಿನ್ನ ತೇಜದ ಮುಂದೆ ರಾಜನಾದರೂ ಅವನು ನಿನ್ನ ಕೂಸು, ಎಂಬುವುದು ಈ ಮೇಲಿನ ಸಾಲುಗಳು ವಿಶ್ಲೇಷಿಸುತ್ತವೆ. ‘ಮೊದಲುಗಿತ್ತಿ’ ಕೊನೆಯ ಸಾಲಿನಲ್ಲಿ ತಾಯಿ ಮಗುವಿನ ಸಂಬಂಧದ ಹೋಲಿಕೆ ಅದ್ಭುತವಾದುದು. ಹೀಗೆ ಭೂಮಿ ಕುರಿತಂತೆ ಬೇಂದ್ರೆಯವರ ‘ಸೌಭಾಗ್ಯ ದರ್ಶನ’ ‘ವಸುಧಾ’ ‘ಇಳೆ ಎಂದರೆ ಬರಿ ಮಣ್ಣಲ್ಲ’ ಧಾರವಡದ ತಾಯಿ’ ಹೆಣ್ಣು–ಮಣ್ಣುಗಳ ಕಲ್ಪನೆ ಸ್ವಾರಸ್ಯಕರವಾಗಿದೆ.

ಕವಿ ಬೇಂದ್ರೆಯವರು ಹುಟ್ಟಿದ್ದು ಧಾರವಾಡದಲ್ಲಿ ಬೆಳೆದದ್ದು ಧಾರವಾಡದಲ್ಲಿ, ಕವಿಯಾಗಿ, ವರಕವಿಯಗಿ, ವರದಾನ ಪಡೆದದ್ದು ಧಾರವಾಡದಲ್ಲಿ. ಅವರ ‘ಜೋಗಿ’ ಎಂಬ ಕವನವು ಧಾರವಾಡದ ಸುತ್ತಲಿನ ನಿಸರ್ಗದ ಮಾಯೆ ಮತ್ತು ಕವಿಯ ಒಳಜೀವದೊಳಗಿನ ಕಾಳರಾತ್ರಿಯ ಭಯಾನಕ ಸಂಶಯಾಕುಲಿತ ಭಾವನೆಗಳಿಂದ ಕೂಡಿಕೊಂಡಿದೆ. ಕವಿವರ್ಯ ಬೇಂದೆಯವರು ಧಾರವಾಡವನ್ನು ತನ್ನ ತಾಯಿಯೆಂದೇ ಕರೆಯುತ್ತಿದ್ದರು.

**‘ನಿನ್ನ ಕಣ್ಣ ಕಡೆಗೋಲಿಂದ**

**ನನ್ನ ಹೃದಯ ಕಡಿಯೇ ತಾಯಿ’**

'ಧಾರವಾಡ ತಾಯಿಗೆ' ಎಂಬ ಕವನದಲ್ಲಿ ಕವಿ ಮೊರೆಯಿಟ್ಟ ಬಗೆ ತಾಯಿ "ನಿನ್ನ ಕಣ್ಣ ಕಡೆಗೋಲಿಂದ" ರಕ್ಷಿಸು ನನ್ನನ್ನೂ ಎಂಬ ತಾಯ್ತನವನ್ನು, ಮಾತೃ ಶಕ್ತಿಯಲ್ಲಿ ಕವಿ ಕಂಡುಕೊಂಡಿರುವರು. ಅಂತೆಯೇ ಅಂಬಿಕಾತನಯದತ್ತ ಎಂಬ ಕಾವ್ಯನಾಮದಲ್ಲಿ ಕೀರ್ತಿವಂತರಾಗಿ ಮಾಡಿದ್ದಾಳೆ ಧಾರವಾಡದ ತಾಯಿ. ನೌಕರಿಯ ಸಲುವಾಗಿ ಧಾರವಡವನ್ನು ಅಗಲುವ ಪ್ರಸಂಗ ಬರುತ್ತದೆ.

**'ನಾವು ಬರ್ತೇವಿನ್ನ ನೆನಪಿರಲಿ ತಾಯಿ।**

**ನಂ ನಮಸ್ಕಾರ ನಿಮಗೆ।**

**ಕಾಯ್ದಿರಿ ಕೂಸಿನ್ಹಾಂಗ ನಮಗ'**

ಎಂದು ಧಾರವಾಡದ ತಾಯಿಯನ್ನು ಕೇಳಿಕೊಳ್ಳುವರು. ಇಲ್ಲಿ ಧಾರವಾಡ ಮಣ್ಣು ಅವರಿಗೆ ಹೊತ್ತು ಆಶ್ರಯ ಕೊಟ್ಟ ತಾಯಿಯಾದರೆ, ಧಾರವಡದ ಮನೆಯಲ್ಲಿ ಜನ್ಮ ಕೊಟ್ಟ ತಾಯಿಯು ಕೂಡ ಇದ್ದರು. ಮತ್ತು ತಾಯಿಯ ಒಂಬತ್ತು ತಿಂಗಳ ಒಡಲು ಮಡಿಲಿನ ಲಾಲಿತ್ಯ, ಮಮತೆ, ಮಮಕಾರ, ಅವಳ ಮಗನ ಬಗ್ಗೆ ಇದ್ದ ಕಾಳಜಿ ಮರೆಯುವ ಹಾಗಿಲ್ಲ. ಇವಳಂತೆ, ಅವಳು ಮಗನನ್ನು ನೆನೆದು ಕಣ್ಣೀರಿಡುವಳು. ಹೀಗೆ ಬೇಂದ್ರೆಯವರಿಗೆ ಹೆಣ್ಣು, ಮಣ್ಣು, ಹೆತ್ತು ಹೊತ್ತ ತಾಯಿಯ ಕುರಿತು ಇರುವ ಕಾಳಜಿ ಅಮೋಘವಾದುದು.

ಹೆಣ್ಣನ್ನು ಹೆಣ್ಣಾಗಿ ನೋಡದೆ, ತಾನು ಹೆಣ್ಣಾಗಿ ಅನುಭವಿಸಿದ ಆ ರೋಧನೆ, ಆ ವೇಧನೆ ಕವಿತೆಯನ್ನಾಗಿ ಹೊರತಂದದ್ದು ಅದುವೆ 'ಪಟ್ಟ ವಿಧವೆ' ಮದುವೆಯನ್ನು ಜ್ಞಾನಪಿಸಿಕೊಂಡರೆ ಹೃದಯವನ್ನು ಸೀಳಿದಂತಾಗುತ್ತದೆ, ಕೊಡಲಿಯಿಂದ ಘಾಸಿ ಗೊಳಿಸಿಕೊಂಡತ್ತಾಗುತ್ತದೆ.

**ಕೊರಳ ಕರಿಮಣಿ, ಗಲ್ಲದರಿಷಿಣವು ಮೂಗಬೊಟ್ಟು**

**ಆ ಮೇಲೆ ಉದ್ದ ಕುಂಕುಮದ ಅಂದ**

**ಆ ಪುಟ್ಟ ಮುತ್ತೈದೆ ಪುಟ ಪಟನೆ ನೆಗೆದಾಟ**

**ಅಷ್ಟೇ ಕಂಡಿತು ಕಣ್ಣಿಗೆ ಚೆಂದ**

ಕಳೆದ ದಿನಗಳಲ್ಲಿ ಬಾಲ್ಯ ವಿವಾಹ ಒಂದು ಶಾಪವಾಗಿ ಪರಿಣಮಿಸಿತು. ಇವತ್ತು ಕಾನೂನಿಗೆ ಒಳಪಟ್ಟು ತಂದೆ, ತಾಯಿಗಳಿಗೆ ಮಕ್ಕಳ ಮದುವೆಯ ಬಗ್ಗೆ ಸ್ವಲ್ಪ ಮಟ್ಟಿಗೆ ಅರಿವು ಇದೆ. ಆದರೆ ಸುಮಾರು ಹತ್ತು ದಶಕಗಳ ಕಾಲ ಹಿಂದಕ್ಕೆ ನಡೆದರೆ ಆ ಅರಿವು ಇರಲಿಲ್ಲ. ಬಾಲ್ಯ ವಿವಾಹಗಳೆ ಹೆಚ್ಚಾಗುತ್ತಿದ್ದವು. ತೊಟ್ಟಿಲಿಗೆ ಭಾಷಿಂಗ ಕಟ್ಟಿ ಮದುವೆ ಮಾಡಿದಂತಹ ಉದಾಹರಣೆಗಳು ಕಾಣುತ್ತವೆ. ಇಂತಹ ಒಂದು ನೈಜ ಘಟನೆ ಕಣ್ಮುಂದೆ ನಡೆದದ್ದನ್ನು ಕವಿ ಕಾವ್ಯವಾಗಿಸಿ ನಮ್ಮ ಮುಂದೆ ಇಟ್ಟಿರುವುದು ಕಾಣುತ್ತೇವೆ. ಭಾರತೀಯ ಸಂಸ್ಕೃತಿಯಲ್ಲಿ ಒಮ್ಮೆ ಗಂಡನನ್ನು ಕಳೆದುಕೊಂಡ ಹೆಣ್ಣು ಮತ್ತೆ ಮದುವೆ ಆಗುವ ಹಾಗಿಲ್ಲ. ಆದ್ದರಿಂದ ಕವಿ ಮುಂದೊರೆದು ಹೇಳುತ್ತಾನೆ ಹೆಣ್ಣಿನ ಜನುಮ ನಾಯಿ ಪಾಡುವೆಂದು.

**'ಹೆಣ್ಣು ಪಾಡು ನಾಯಿ ಪಾಡು,**

**ಬೇಡ ಬೇಡ ಹೆಣ್ಣು ಜನ್ಮ'**

ಎಂದು ಕವಿ ಎಷ್ಟೋ ಸಲ ಬೈದುಕೊಂಡಿರುವುದನ್ನು ಅವರ ಕವಿತೆಗಳ ಉದ್ದಕ್ಕೂ ಕಾಣುತ್ತೇವೆ. ಈ ರೀತಿಯಾಗಿ ಸಮಾಜದ ದುಃಖವನ್ನು ತಮ್ಮ ದುಃಖದಲ್ಲಿ ವಿಲೀನಗೊಳಿಸಿ ಸಮಾಜಕ್ಕೆ ಮಾದರಿಯಾಗಿ ನಿಲ್ಲುವರು.

**ಉಪಸಂಹಾರ**

ಬೇಂದ್ರೆಯವರು ಹೇಳುವಂತೆ "ನಂದನದ ತುಣುಕೊಂದು ಬಿದ್ದದೆ" ಅಂದರೆ ಮರಳಿ ಸಾಧನ ಕೇರಿಗೆ ಬಂದು ಹುಡುಕಿದ್ದು ನಂದನದ ತುಣುಕು. ಅವರು ಎಲ್ಲೂ ಕಾಣದ ಆನಂದ ಸಾಧನ ಕೇರಿಯಲ್ಲಿ ಕಂಡದ್ದು, ಕವನದುದ್ದಕ್ಕೂ ತಿಳಿದುಕೊಳ್ಳಬೇಕಾಗುತ್ತದೆ. ಅವರು ಜೀವನ ಸಾಗಿಸಲು ಪಟ್ಟ ಪಾಡು ಅಷ್ಟೀಷ್ಟಲ್ಲ, ಜೀವನ ನಡೆಸಿಕೊಂಡು ಹೋಗುವುದೆ ಒಂದು ಸಾಹಸದ ಕೆಲಸವಾಗಿತ್ತು. ಆಗಾಗ ಅವರು ಬಡ ಮಾಸ್ತಾರರೆಂದು ಹೇಳುವುದು ಸತ್ಯದ ಸಂಗತಿ ಎಂದು ಅರಿವು ಮೂಡಿಸುತ್ತದೆ. ಅವರು ತಮ್ಮ ಜೀವನವಷ್ಟೇ ಅಲ್ಲ, ತಮ್ಮ ಜೀವನಕ್ಕಿಂತಲೂ ತಾಯಿ ಕುಲಕ್ಕೆ ಪ್ರೀತಿಸಿದ್ದು ಹೆಚ್ಚು. ಅವಳ ನೋವು–ನಲಿವುಗಳಲ್ಲಿ  ಬಾಗಿಯಾಗಿ ಸಾಂತ್ವನ ಹೇಳಿದ್ದು ಹೆಚ್ಚು. ಈ ಕಾರಣಕ್ಕಾಗಿ ಬೆಂದ ಕವಿ ಬೇಂದ್ರೆ ರಸ–ಋಷಿ ಸಾಲಿನಲ್ಲಿ ಸೇರುವರು.

**ಪರಾಮರ್ಶನ ಗ್ರಂಥಗಳು**


- ಬುದ್ದಣ್ಣ ಹಿಂಗಮಿರೆ. (1977). ಇಳಿದು ಬಾ ತಾಯಿ. ಸಮಾಜ ಪುಸ್ತಕಾಲಯ, ಧಾರವಾಡ.
- ಜಗದೀಶ  ಕೊಪ್ಪ. ಎನ್. (2009). ಉತ್ತರ ದಕ್ಷಿಣ  ಬೇಂದ್ರೆ ಕುವೆಂಪು ಕವಿತೆಗಳ ಕುರಿತು. ಪಲ್ಲವ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ.
- ಕೀರ್ತನಾಥ ಕುರ್ತಕೋಟಿ. (1998). ನೂರ ಮರ–ನೂರು ಸ್ವರ. ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ, ವಿದ್ಯಾರಣ್ಯ.
- ಪ್ರಭುಶಂಕರ. (2008). ರಾಷ್ಟ್ರಕವಿ ಕುವೆಂಪು. ಸಾಹಿತ್ಯ ಅಕಾಡೆಮಿ, ನವದೆಹಲಿ.
- ಶೇಷಗಿರಿರಾವ್, ಎಲ್. ಎಸ್. (2008). ಹೊಸಗನ್ನಡ ಸಾಹಿತ್ಯ ಚರಿತ್ರೆ. ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.